# ಹೆರಿಗೆ ಸಮಯದಲ್ಲಿ ಬಳಸುವ ಎಪಿಡ್ಯೂರಲ್ ಸುರಕ್ಷಿತವೆ?

**ಹೆರಿಗೆ ಸಮಯದಲ್ಲಿ ಬರುವ ವಿಪರೀತ ನೋವನ್ನು ಕೆಲವು ಗರ್ಭಿಣಿಯರಿಗೆ ತಡೆದುಕೊಳ್ಳಲಾಗುವುದಿಲ್ಲ.ಇಂಥವರಿಗಾಗಿಯೇ ನೋವಿಲ್ಲದೆ ಹೆರಿಗೆಯಾಗಲು ಎಪಿಡ್ಯೂರಲ್ ಎಂಬ ಇಂಜೆಕ್ಷನ್ ಲಭ್ಯವಿದ್ದು, ಹೆರಿಗೆ ನಿರಾತಂಕವಾಗಲು ಸಹಕರಿಸುತ್ತದೆ.**

■ ಡಾ.ಕೆ. ಜಯಲಕ್ಷ್ಮಿ

ಗೀತಾಗೆ ಚೊಚ್ಚಲ ಹೆರಿಗೆ. ಒಂಬತ್ತು ತಿಂಗಳು ತುಂಬಿ ಹೆರಿಗೆಯ ನೋವು ಆರಂಭವಾದಾಗ ಮನೆಯವರಿಗೆಲ್ಲಾ ಆತಂಕ ಜೊತೆಗೆ ಆನಂದ. ಒಬ್ಬಳೇ ಮಗಳು ಎಂದು ಮುದ್ದಾಗಿಯೇ ಬೆಳೆಸಿದ್ದರು. ನೋವೇ ಅರಿಯದ ಗೀತಾ ಆಸ್ಪತ್ರೆಗೆ ಬಂದು ಹೆರಿಗೆಯ ವಾರ್ಡ್‌ನಲ್ಲಿ ಅಡ್ಮಿಟ್ ಆದಾಗ ಸಹಜವಾಗಿಯೇ ತುಂಬಾ ಗಾಬರಿಯಾಗಿದ್ದಳು. ಅವಳಿಗೆ ಸ್ವಲ್ಪ ಸಮಯ ಡ್ರಿಪ್ ಹಾಕಲಾಗಿತ್ತು. ನಂತರ ಎನಿಮಾ ಕೊಟ್ಟು ಮತ್ತೆ ಡ್ರಿಪ್ ಮುಂದುವರೆಸಲಾಯಿತು.

ನೋವು ಹೆಚ್ಚಾಗುತ್ತಿದ್ದಂತೆ ಗೀತಾ ಗಾಬರಿಯಿಂದ ಕೂಗತೊಡಗಿದಳು. ಆಕೆಯ ತಾಯಿಗೆ ಆತಂಕ ಹೆಚ್ಚಾಗಿ 'ಏನಾದ್ರೂ ಮಾಡಿ ಪ್ಲೀಸ್, ನನ್ನ ಮಗಳು ನೋವು ಅನುಭವಿಸುವುದನ್ನು ನೋಡಲಾರೆ' ಎಂದು ನರ್ಸ್ ಬಳಿ ಗೋಗರೆದರು. ಆಗ ನರ್ಸ್ 'ನೋಡಿ, ನಿಮ್ಮ ಮಗಳಿಗೆ ಎಪಿಡ್ಯೂರಲ್ ಇಂಜೆಕ್ಷನ್ ಕೊಡಿಸಿ' ಎಂದಳು.

'ಹಾಗೆಂದ್ರೆ ಏನು?' ಎಂದಳು ತಾಯಿ.

ಆಗ ಒಳಗೆ ಬಂದ ವೈದ್ಯರು, 'ಸೊಂಟಕ್ಕೆ ಒಂದು ಇಂಜೆಕ್ಷನ್ ಕೊಡಲಾಗುತ್ತದೆ. ಅನಸ್ತೀಶಿಯಾ ಡಾಕ್ಟರ್ ಬಂದು ಕೊಡುತ್ತಾರೆ. ಹೆರಿಗೆಯ ಖರ್ಚು ಒಂದೈದು ಆರು ಸಾವಿರ ಹೆಚ್ಚಾಗುತ್ತೆ. ಆದರೆ ನಿಮ್ಮ ಮಗಳಿಗೆ ಹೆರಿಗೆಯ ನೋವು ತಿಳಿಯೋದೇ ಇಲ್ಲ' ಎಂದರು. ಸದ್ಯ ಮಗಳಿಗೆ ನೋವಾಗದಿದ್ದರೆ ಸಾಕು ಎಂದು ಅವರು ಎಪಿಡ್ಯೂರಲ್ ಅನಸ್ತೀಶಿಯಾಗೆ ಒಪ್ಪಿಗೆ ಕೊಟ್ಟರು.

ಸಾಮಾನ್ಯವಾಗಿ ಹೀಗೆ ನಡೆಯುವ ಘಟನೆಗಳಲ್ಲಿ ಒಂದು ಫಾರ್ಮ್‌ನಲ್ಲಿ ಗರ್ಭಿಣಿಯ ಸಂಬಂಧಿಕರ ಸಹಿ ಪಡೆಯಲಾಗುತ್ತದೆ. ಅದರಲ್ಲಿ ಏನಿದೆ ಎಂದು ಆಸ್ಪತ್ರೆಯವರು ಹೇಳುವುದೂ ಇಲ್ಲ, ಗರ್ಭಿಣಿಯ ಕಡೆಯವರು ಓದುವುದೂ ಇಲ್ಲ. ಸಹಿ ಹಾಕಿದ ನಂತರ ಅರಿವಳಿಕೆಯ ವೈದ್ಯರು ಬಂದು ಬೆನ್ನಿಗೆ ಇಂಜೆಕ್ಷನ್ ಕೊಡುತ್ತಾರೆ. ಈ ಎಪಿಡ್ಯೂರಲ್ ಅನಸ್ತೀಶಿಯಾದ ಆಗುಹೋಗುಗಳ ಬಗ್ಗೆ ನಿಖರವಾಗಿ ಆಸ್ಪತ್ರೆಯವರು ವಿವರಿಸುವುದಿಲ್ಲ.

ಹೆರಿಗೆ ಎಂಬ ಘಟ್ಟ

ಹೆರಿಗೆ ಎನ್ನುವುದು ಮಹಿಳೆಗೆ ನೋವಿನ ಅನುಭವವೇನೋ ನಿಜ. ಆದರೆ ಮಹಿಳೆ ಇದನ್ನು ಯಾವ ರೀತಿ ಎದುರಿಸುತ್ತಾಳೆ ಎನ್ನುವುದು ವಿಭಿನ್ನವಾಗಿರುತ್ತದೆ. ಈಗಿರುವ ಹೆರಿಗೆಯ ನೋವು ಶಾಮಕಗಳಲ್ಲಿ ಎಪಿಡ್ಯೂರಲ್ ಅನಸ್ತೀಶಿಯಾ ಎಂಬುದು ಅತ್ಯಂತ ಪ್ರಭಾವಕಾರಿಯಾಗಿದೆ. ಇದನ್ನು ಸಹಜ ಹೆರಿಗೆ ಮತ್ತು ಸಿಜೇರಿಯನ್ ಎರಡು ಬಗೆಯ ಹೆರಿಗೆಗಳಲ್ಲೂ ಬಳಸಲಾಗುತ್ತದೆ. ಏಕೆಂದರೆ ಇಲ್ಲಿ ಗರ್ಭಿಣಿಯು ಎಚ್ಚರಿಕೆಯಿಂದಲೇ ಇದ್ದು ಎಲ್ಲವನ್ನೂ ಗಮನಿಸಬಹುದಾಗಿದೆ.

ಈ ಇಂಜೆಕ್ಷನನ್ನು ಬೆನ್ನಿನ ಹಿಂಭಾಗದಲ್ಲಿ ಬೆನ್ನುಹುರಿಯ ಪದರದೊಳಕ್ಕೆ ನೀಡಲಾಗುತ್ತದೆ. ಇದರಿಂದ ಗರ್ಭಿಣಿಯ ಸೊಂಟದ ಕೆಳಗಿನ ಭಾಗವು ಜೋಂ ಹಿಡಿದಂತಾಗುತ್ತದೆ.

## ಅಡ್ಡ ಪರಿಣಾಮಗಳು

